**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 2633/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ, ಭಟ್ಕಳ ಗ್ರಾಮೀಣ ಪೋಲಿಸ್

**– ವಿರುದ್ಧ –**

**ಆರೋಪಿತರು:**

1. ಮಂಜುನಾಥ ತಂದೆಃ ನಾರಾಯಣ ನಾಯ್ಕ,
ಪ್ರಾಯಃ 66 ವರ್ಷ, ವೃತ್ತಿಃ ಕೂಲಿಕೆಲಸ,
ಸಾಃ ಬೆದ್ರಕೇರಿ ಬೆಳಕೆ, ಭಟ್ಕಳ.

2. ನಾಗಮ್ಮ ಕೋಂಃ ಮಂಜುನಾಥ ನಾಯ್ಕ,
ಪ್ರಾಯಃ 56 ವರ್ಷ, ವೃತ್ತಿಃ ಗೃಹಿಣಿ ,
ಸಾಃ ಬೆದ್ರಕೇರಿ ಬೆಳಕೆ, ಭಟ್ಕಳ.

3. ಮೋಹಿನಿ ತಂದೆಃ ಮಂಜುನಾಥ ನಾಯ್ಕ,
ಪ್ರಾಯಃ 29 ವರ್ಷ, ವೃತ್ತಿಃ ಮನೆಕೆಲಸ ,
ಸಾಃ ಬೆದ್ರಕೇರಿ ಬೆಳಕೆ, ಭಟ್ಕಳ.

4. ರೇವತಿ ಕೋಂಃ ಹರೀಶ ನಾಯ್ಕ,
ಪ್ರಾಯಃ 35 ವರ್ಷ, ವೃತ್ತಿಃ ಕೂಲಿಕೆಲಸ ,
ಸಾಃ ನಾಗಪ್ಪನಾಯ್ಕ ರಸ್ತೆ, ಭಟ್ಕಳ.

5. ಹರೀಶ ತಂದೆಃ ಜಟ್ಟಪ್ಪ ನಾಯ್ಕ,
ಪ್ರಾಯಃ 36 ವರ್ಷ, ವೃತ್ತಿಃ ಇಲೆಕ್ಟ್ರಿಕ್ ಕೆಲಸ,
ಸಾಃ ನಾಗಪ್ಪನಾಯ್ಕ ರಸ್ತೆ, ಭಟ್ಕಳ.

**ಃ ದೋಷಾರೋಪಣೆ ಃ**

ಶ್ರೀಮತಿ.ಧನವತಿ. ಬಿ.ಎ.,(ಲಾ)ಎಲ್ಎಲ್ಬಿ., ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿ, ಭಟ್ಕಳ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ವ್ಯಾಪ್ತಿಯಲ್ಲಿ ಬರುವ ಭಟ್ಕಳ ತಾಲೂಕಿನ ಬೆಳಕೆ, ಬೆದ್ರಕೇರಿಯಲ್ಲಿ ದಿನಾಂಕ: 28-03-2024 ರಂದು ಸಂಜೆ 4-30 ಗಂಟೆಗೆ

ಪಿರ್ಯಾದಿ ಗಣಪತಿ ತಂದೆಃ ನಾರಾಯಣ ನಾಯ್ಕ ರವರು  ತಮ್ಮ ಮನೆಯ ಹೊರಗಡೆ ಭದ್ರತೆಗೆ ತೋಟ ನೋಡಿಕೊಳ್ಳಲು ಚಾ.ಸಾ.-6 ಪಾಂಡು ತಂದೆಃ ಮಾಸ್ತಪ್ಪ ನಾಯ್ಕ  ಮತ್ತು ಚಾಸಾ-7 ಮಂಜುನಾಥ ಗೌಡರ್ ರವರ ಮೂಲಕ ಸಿ.ಸಿ ಕ್ಯಾಮೆರಾ ಅಳವಡಿಸುತ್ತಿದ್ದಾಗ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ,  ನಿಮ್ಮಲ್ಲಿ  1 ರಿಂದ 3 ಆರೋಪಿತರು ಸೇರಿ ಪಿರ್ಯಾದಿಯು ಅರಣ್ಯ ಅತಿಕ್ರಮಣ ಜಮೀನಿನಲ್ಲಿ ಮಾಡಿದ ತೆಂಗಿನ ತೋಟದಲ್ಲಿ ಬಂದು ಸಿ.ಸಿ ಕ್ಯಾಮೆರಾ ಅಳವಡಿಸಲು ಕೊಡದೇ ಫಿರ್ಯಾದಿಗೆ ಬೊಳೆಮಗನೇ ಬೇವರ್ಸಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಮತ್ತು ನಿಮ್ಮಲ್ಲಿ 4 ಮತ್ತು 5 ನೇ ಆರೋಪಿತರು ಸಹ ಪಿರ್ಯಾದಿಯ  ಮನೆಯ ಹತ್ತಿರ ಬಂದು ಫಿರ್ಯಾದಿಗೆ ಅವಾಚ್ಯವಾಗಿ ಬೈಯ್ದು,  ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯುದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೆಯದಾಗಿ, ಅದೇ ದಿನ, ಅದೇ ಸ್ಥಳದಲ್ಲಿ  ಮತ್ತು ಸಮಯದಲ್ಲಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ,  ಪಿರ್ಯಾದಿಯವರಿಗೆ  ನಿಮ್ಮಲ್ಲಿ 2 ಮತ್ತು 3 ನೇ ಆರೋಪಿತರು ಕೈಯಿಂದ ಫಿರ್ಯಾದಿಗೆ ಮೈಮೇಲೆ ಹೊಡೆದುದ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯುದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ ಅದೇ ದಿನ, ಅದೇ ಸ್ಥಳದಲ್ಲಿ ಮತ್ತು ಸಮಯದಲ್ಲಿ, ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿ, ಪಿರ್ಯಾದಿಯವರಿಗೆ  ನಿಮ್ಮಲ್ಲಿ 1 ನೇ ಆರೋಪಿತನು ಸಿ.ಸಿ ಕ್ಯಾಮೆರಾ ಹಾಕಿದರೆ ನಿನ್ನನ್ನು ಕೊಂದೇ ಬಿಡುತ್ತೇನೆ ಎಂದು ಏರು ಧ್ವನಿಯಲ್ಲಿ ಹೇಳಿ ಜೀವದ ಬೆದರಿಕೆ ಹಾಕಿ ಮತ್ತು ನಿಮ್ಮಲ್ಲಿ 4 ಮತ್ತು 5 ನೇ ಆರೋಪಿತರು ಸಹ ಪಿರ್ಯಾದಿಯ  ಮನೆಯ ಹತ್ತಿರ ಬಂದು ಫಿರ್ಯಾದಿಗೆ ಸಿ. ಸಿ. ಕ್ಯಾಮರಾ ಹಾಕಿದರೆ ಕೊಲೆ ಮಾಡುವುದಾಗಿ ಜೀವದ ಬೆದರಿಕೆ ಹಾಕಿ ,ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 506  ಸಹಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯುದ ಸಂಜ್ಞಾನದೊಳಗೆ ಮಾಡಿರುವಿರಿ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – 1 ನೇ ಆರೋಪಿಃ ಹೌದು

2 ನೇ ಆರೋಪಿಃ ಹೌದು

3 ನೇ ಆರೋಪಿಃ ಹೌದು

4 ನೇ ಆರೋಪಿಃ ಹೌದು

5 ನೇ ಆರೋಪಿಃ ಹೌದು

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – 1 ನೇ ಆರೋಪಿಃ ಇಲ್ಲ. ವಿಚಾರಣೆಯಾಗಬೇಕು

2 ನೇ ಆರೋಪಿಃ ಇಲ್ಲ. ವಿಚಾರಣೆಯಾಗಬೇಕು

3 ನೇ ಆರೋಪಿಃ ಇಲ್ಲ. ವಿಚಾರಣೆಯಾಗಬೇಕು

4 ನೇ ಆರೋಪಿಃ ಇಲ್ಲ. ವಿಚಾರಣೆಯಾಗಬೇಕು

5 ನೇ ಆರೋಪಿಃ ಇಲ್ಲ. ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ** )

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 03-02-2026.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.